## ನಿಮ್ಮೊಡನೆ

# ಲೈಂಗಿಕ ಹಿಂಸೆಗೆ ಕನ್ನಡ ಚಿತ್ರರಂಗ ಅತೀತವೇ?

ಮಹಿಳೆಯರ ಸುರಕ್ಷತೆಯ ಕುರಿತ ಪ್ರಶ್ನೆಗಳನ್ನು ಹತ್ತಿಕ್ಕುವ ಕೆಲಸ ಚಿತ್ರೋದ್ಯಮದಿಂದ ಆಗಬಾರದು. ಕೊಳಕು ಇರುವುದು ಅವಮಾನಕರ. ಆ ಕೊಳಕನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುವುದು ಲಜ್ಜೆಗೇಡಿತನದ ಪರಮಾವಧಿ. ಸಮಸ್ಯೆಗಳು ಇರುವುದೇ ನಿಜವಾದಲ್ಲಿ, ಅವುಗಳನ್ನು ಪರಿಹರಿಸಿಕೊಳ್ಳುವುದು ವಿವೇಕದ ಮಾರ್ಗ.

ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯಗಳ ಕುರಿತ ಚರ್ಚೆ ನಿಧಾನವಾಗಿಯಾದರೂ ಆರಂಭಗೊಂಡಿರುವುದು ಸ್ವಾಗತಾರ್ಹ. ಈ ಚರ್ಚೆಗೆ 'ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಈಕ್ವಾಲಿಟಿ' (ಫೈರ್) ಸಂಸ್ಥೆ ಚಾಲನೆ ನೀಡಿದೆ. ಮಲೆಯಾಳಂ ಚಿತ್ರೋದ್ಯಮದಲ್ಲಿನ ಹೆಣ್ಣುಬಾಕತನವನ್ನು ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಯಲು ಮಾಡಿದೆ. ಕೇರಳದಲ್ಲಿ 'ಹೇಮಾ ಸಮಿತಿಯ ವರದಿ' ಪ್ರಕಟಗೊಂಡ ನಂತರ ಚಿತ್ರರಂಗದಲ್ಲಿನ ಲೈಂಗಿಕ ದೌರ್ಜನ್ಯಗಳ ಕುರಿತು ಅಲ್ಲಿನ ನಟಿಯರು ಮಾತನಾಡತೊಡಗಿದ್ದು, ಚಿತ್ರೋದ್ಯಮದಲ್ಲಿನ ಗಂಡಿನ ಚಪಲಗಳ ಕೊಳಕುತನ ಹೊರಗೆ ಬರುತ್ತಿದೆ. ಈ ಕೊಳಕುತನ ಕೇರಳಕ್ಕೆ ಸೀಮಿತವಾದುದೇನಲ್ಲ. ಸಂವೇದನಾಶೀಲ ಸಿನಿಮಾಗಳನ್ನು ರೂಪಿಸುವಲ್ಲಿ ದೇಶದಲ್ಲಿಯೇ ಹೆಸರಾದ ಚಿತ್ರೋದ್ಯಮವೇ ಹೆಣ್ಣಿನ ವಿಷಯದಲ್ಲಿ ಹೀನವಾಗಿ ನಡೆದುಕೊಂಡಿರುವಾಗ, ಸೃಜನಶೀಲತೆಗೂ ಸಿನಿಮಾಕ್ಕೂ ಸಂಬಂಧವಿದೆ ಎನ್ನುವುದರ ಬಗ್ಗೆ ನಂಬಿಕೆಯಿಲ್ಲದವರೇ ಹೆಚ್ಚಾಗಿರುವ ಚಿತ್ರೋದ್ಯಮಗಳಲ್ಲಿ ನೈತಿಕತೆಯನ್ನು ನಿರೀಕ್ಷಿಸುವುದು ಹೇಗೆ?

ಲೈಂಗಿಕ ದೌರ್ಜನ್ಯ ಪ್ರಕರಣಗಳ ಕುರಿತು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ರಾಜ್ಯ ಸರ್ಕಾರವನ್ನು 'ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಈಕ್ವಾಲಿಟಿ' (ಫೈರ್) ಸಂಸ್ಥೆ ಒತ್ತಾಯಿಸಿರುವುದು ಸರಿಯಾಗಿದೆ. ಲೈಂಗಿಕ ಹಿಂಸೆ ಸೇರಿದಂತೆ ಚಿತ್ರೋದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಇತರ ಸಮಸ್ಯೆಗಳ ಕುರಿತು ಚರ್ಚೆ–ತನಿಖೆ ನಡೆಯಬೇಕೆನ್ನುವುದು 'ಫೈರ್' ಆಗ್ರಹ. ಚಿತ್ರರಂಗದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸುರಕ್ಷಿತವಾದ ವಾತಾವರಣ ಖಾತರಿಪಡಿಸುವುದು, ಅದಕ್ಕೆ ತಕ್ಕನಾದ ನೀತಿಯನ್ನು ರೂಪಿಸುವುದು ಸರ್ಕಾರದ ಕರ್ತವ್ಯ. ತನ್ನ ಹೊಣೆಗಾರಿಕೆಯಿಂದ ಸರ್ಕಾರ ನುಣುಚಿಕೊಳ್ಳದೆ, ಆದಷ್ಟು ಬೇಗ ಸಮಿತಿಯೊಂದನ್ನು ರೂಪಿಸಬೇಕಾಗಿದೆ.

ಲಿಂಗ ಸಮಾನತೆಯ ಕುರಿತ ಪ್ರಶ್ನೆಗಳಿಗೆ ಚಿತ್ರರಂಗ ಎಂದಿನಂತೆ ಇರುಸುಮುರುಸಿನಿಂದ ಪ್ರತಿಕ್ರಿಯಿಸುತ್ತಿದೆ. 'ಸಮಸ್ಯೆ ಇದೆ' ಎಂದು ಒಪ್ಪಿಕೊಳ್ಳಲೇ ಅನೇಕರು ತಯಾರಿಲ್ಲ. ಲೈಂಗಿಕ ದೌರ್ಜನ್ಯ ಚಿತ್ರರಂಗಕ್ಕೆ ಮಾತ್ರ ಸೀಮಿತವಲ್ಲ, ಎಲ್ಲ ಕ್ಷೇತ್ರಗಳಲ್ಲೂ ಇದೆ ಎನ್ನುವರ್ಥದಲ್ಲಿ ಹಿರಿಯ ಕಲಾವಿದರೊಬ್ಬರು ಮಾತನಾಡಿದ್ದಾರೆ. 'ನನ್ನ ಗಮನಕ್ಕೆ ಬಂದ ಹಾಗೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಕನ್ನಡ ಚಿತ್ರೋದ್ಯಮದಲ್ಲಿ ಇಲ್ಲ. ಚಿತ್ರರಂಗ ಆ ಮಟ್ಟಿಗೆ ಹಾಳಾಗಿಲ್ಲ. ನಮ್ಮ ಚಿತ್ರರಂಗದಲ್ಲಿ ಕುಟುಂಬದ ಬಾಂಧವ್ಯವಿದೆ' ಎಂದು ನಟಿಯೊಬ್ಬರು ಹೇಳಿದ್ದಾರೆ. ಇಂಥ ಅಸೂಕ್ಷ್ಮ ಮಾತುಗಳಿಗೆ ಏನು ಹೇಳುವುದು? ಹೆಚ್ಚಿನ ಸಂಖ್ಯೆಯ ಲೈಂಗಿಕ ದೌರ್ಜನ್ಯಗಳು ಕುಟುಂಬದೊಳಗೇ ನಡೆಯುತ್ತಿವೆ ಎನ್ನುವುದನ್ನು ತಿಳಿಯಲು ವಿಶೇಷ ಜ್ಞಾನದ ಅಗತ್ಯವಿಲ್ಲ. ಹೆಣ್ಣುಬಾಕರ ಚಪಲಗಳಿಗೆ ಕೌಟುಂಬಿಕ ಸಂಬಂಧಗಳು ಒಂದು ಬಗೆಯ ರಕ್ಷಣೆಯಾಗಿಯೂ ಒದಗಿಬರುತ್ತವೆ. ಈ ವಾಸ್ತವವನ್ನು ಅರಿಯದೆ, 'ನಾವೆಲ್ಲಾ ಒಂದು ಕುಟುಂಬ, ನಮ್ಮಲ್ಲಿ ಎಲ್ಲವೂ ಸರಿಯಾಗಿದೆ' ಎನ್ನುವ ಅರ್ಥದ ಮಾತುಗಳು ಅಸೂಕ್ಷ್ಮವಷ್ಟೇ ಅಲ್ಲ, ಬೇಜವಾಬ್ದಾರಿ ವರ್ತನೆಯೂ ಹೌದು. ಲೈಂಗಿಕ ಹಿಂಸೆ ಬೇರೆ ಕ್ಷೇತ್ರಗಳಲ್ಲೂ ಇದೆ ಎನ್ನುವ ಮಾತನ್ನು ಒಪ್ಪಬಹುದಾದರೂ, ಈ ಅಭಿಪ್ರಾಯದಲ್ಲಿ ಸಮಸ್ಯೆಯನ್ನು ಸರಳೀಕರಿಸುವ ಧೂರ್ತತನ ಇರುವುದನ್ನು ಗಮನಿಸಬೇಕು. ಎಲ್ಲೆಡೆಯೂ ಇರುವುದು 'ಸಹಜ' ಅಥವಾ 'ಒಪ್ಪಿತ' ಎನ್ನಿಸಿಕೊಳ್ಳುವುದಿಲ್ಲ. ಹೆಣ್ಣಿನ ದನಿಯನ್ನು ಹತ್ತಿಕ್ಕುವಲ್ಲಿ ಹಣ, ಅಧಿಕಾರದ ಪಾತ್ರ ಹೆಚ್ಚಾಗಿರುವುದರಿಂದ ಸಿನಿಮಾದಲ್ಲಿ ಲೈಂಗಿಕ ಹಿಂಸೆಗೆ ಹೆಚ್ಚಿನ ಅವಕಾಶಗಳಿವೆ ಎನ್ನುವುದು ಎಲ್ಲರೂ ಬಲ್ಲ ವಾಸ್ತವ.

ಲೈಂಗಿಕ ಹಿಂಸೆಯ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿರುವ 'ಫೈರ್' ಚಿತ್ರೋದ್ಯಮದ ಅಧಿಕೃತ ಸಂಸ್ಥೆಯಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಹೀಗೆ ಮಾತನಾಡುವವರಿಗೆ, ಪ್ರಶ್ನೆಗಳಲ್ಲಿನ ಕಾಳಜಿಗಿಂತಲೂ ಪ್ರಶ್ನೆ ಕೇಳುತ್ತಿರುವವರು ಯಾರು ಎನ್ನುವುದೇ ಮುಖ್ಯವಾಗಿರುವಂತಿದೆ. ಪ್ರಶ್ನೆಗಳನ್ನು ಕೇಳಬೇಕಾದವರು ಮೌನವಾಗಿರುವುದರಿಂದ ಯಾರಾದರೂ ಮಾತನಾಡಲೇಬೇಕಾಗಿದೆ, ಆ ಕೆಲಸವನ್ನು 'ಫೈರ್' ಮಾಡುತ್ತಿದೆ. ಈ ಕೆಲಸವನ್ನು ಚಿತ್ರೋದ್ಯಮದ 'ಅಧಿಕೃತ' ಸಂಸ್ಥೆಗಳಿಗೆ ಸೇರಿದವರೂ ಮಾಡಬೇಕಾಗಿದೆ. ಯಥಾಸ್ಥಿತಿವಾದದ ಮುಂದುವರಿಕೆಯಾದ 'ನಮ್ಮಲ್ಲಿ ಎಲ್ಲವೂ ಸರಿಯಾಗಿದೆ' ಎನ್ನುವ ಮನೋಭಾವದಿಂದ ಚಿತ್ರೋದ್ಯಮ ಹೊರಗೆ ಬರಬೇಕು.

ನಟಿಯೊಬ್ಬರು 'ಮೀ ಟೂ' ಆರೋಪ ಮಾಡಿದಾಗ ಕನ್ನಡ ಚಿತ್ರೋದ್ಯಮ ಅಸೂಕ್ಷ್ಮವಾಗಿ ನಡೆದುಕೊಂಡಿತ್ತು ಹಾಗೂ ಲಜ್ಜೆಯಿಲ್ಲದೆ ಆರೋಪಿಯ ಬೆನ್ನಿಗೆ ನಿಂತಿತ್ತು. ಕೊಲೆ ಆರೋಪದಲ್ಲಿ ನಟನೊಬ್ಬ ಜೈಲು ಸೇರಿರುವ ಘಟನೆಗೆ ಸಂಬಂಧಿಸಿದಂತೆ ಚಿತ್ರರಂಗದ ಕೆಲವರ ಪ್ರತಿಕ್ರಿಯೆಯೂ, ಚಿತ್ರೋದ್ಯಮದ ವೈಚಾರಿಕ ದಾರಿದ್ರ್ಯಕ್ಕೆ ಉದಾಹರಣೆಯಂತಿವೆ. ಸಿನಿಮಾರಂಗದಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಪ್ರಶ್ನೆಗಳು ಎದ್ದಿರುವ ಸಂದರ್ಭದಲ್ಲಿ, ಚಿತ್ರೋದ್ಯಮ ಪ್ರಶ್ನೆಗಳನ್ನು ಹತ್ತಿಕ್ಕುವ ಕೆಲಸ ಮಾಡಬಾರದು; ಆತ್ಮಾವಲೋಕನಕ್ಕೆ ಅವಕಾಶ ಕಲ್ಪಿಸಬೇಕು. ಕೊಳಕು ಇರುವುದು ಅವಮಾನಕರ ಎನ್ನುವುದು ನಿಜ. ಆ ಕೊಳಕನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸುವುದು ಲಜ್ಜೆಗೇಡಿತನದ ಪರಮಾವಧಿ. ಸಮಸ್ಯೆಗಳು ಇರುವುದೇ ನಿಜವಾದಲ್ಲಿ, ಅವುಗಳನ್ನು ಪರಿಹರಿಸಿಕೊಳ್ಳುವುದು ವಿವೇಕದ ಮಾರ್ಗ. ಸಮಸ್ಯೆಗಳು ಇಲ್ಲದೆ ಹೋದಲ್ಲಿ, ಆ ಸಾಚಾತನ ಸಾಬೀತಾಗಲಿಕ್ಕಾದರೂ ತನಿಖೆ ಅನಿವಾರ್ಯ.

■ ರಘುನಾಥ ಚ.ಹ.



ಈಶ್ವರ್